# ಕಥಾ ಸಾಹಿತ್ಯದಲ್ಲಿ ಮಹಿಳೆ

## ಎಮ್. ಶೆಲ್ವಿ ಬಾಲಕೃಷ್ಣನ್

ಸಹ ಪ್ರಾಧ್ಯಾಪಕಿ, ಕನ್ನಡ ವಿಭಾಗ, ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಸ್ಟಡೀಸ್, ಬೇಗೂರು ಕೊಪ್ಪ ರೋಡ್, ಬೆಂಗಳೂರು.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246600**

## ABSTRACT:

ಸಾಹಿತ್ಯ ಪ್ರಪಂಚದಲ್ಲಿ ಕಥನ ಸಾಹಿತ್ಯ ತನ್ನದೇ ಆದ ವಿಶಿಷ್ಟ ಸ್ಥಾನಮಾನವನ್ನು ಹೊಂದಿದೆ. ಇದು ಬಹಳಷ್ಟು ಜನಪ್ರಿಯವಾದ ಮಾಧ್ಯಮ ಎಂದು ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಅದರಲ್ಲಿ ವಿಶೇಷವಾಗಿ ನಾವುಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಕಥಾಸಾಹಿತ್ಯವು ಒಂದಾಗಿದೆ. ಮಹಿಳಾ ಸಾಹಿತ್ಯವನ್ನು ಗಮನಿಸಿದಾಗ ಆಯಾಕಾಲಕ್ಕೆಅನುಗುಣವಾಗಿ ತಮ್ಮ ಅನುಭವಗಳನ್ನು,ಭಾವನೆಗಳನ್ನು ಅವಮಾನಗಳನ್ನು ಅಭಿವ್ಯಕ್ತ ಪಡಿಸಿರುವುದು ಕಂಡು ಬರುತ್ತದೆ. ಕಥಾ ಸಾಹಿತ್ಯದಲ್ಲಿ ಮಹಿಳೆಯರು ಬಹಳ ಪ್ರಮುಖವಾಗಿ ತಮ್ಮ ನೋವು-ದುಃಖ ದುಮ್ಮಾನಗಳನ್ನು ಹೇಳಿಕೊಳ್ಳುವ ಸಲುವಾಗಿ ಕಥನ ಸಾಹಿತ್ಯವನ್ನು ಮಾಧ್ಯವಾಗಿಸಿಕೊಂಡಿದ್ದಾರೆ. ಈ ಪ್ರಪಂಚವನ್ನು ನೋಡುವ ದೃಷ್ಟಿಯಲ್ಲಿ ಸ್ತ್ರೀ ಪುರುಷರ ನಡುವೆ ಆಳವಾದ ಮೂಲಭೂತವಾದ ಅಂತರವಿರುವುದನ್ನು ಕಾಣಬಹುದಾಗಿದೆ.

## KEYWORDS:

ಕಥಾ ಸಾಹಿತ್ಯ, ಮಹಿಳಾ ಲೇಖಕಿಯರು, ಸ್ವಾತಂತ್ರ್ಯ ಚಳುವಳಿ, ಸುಧಾರಣಾ ಚಳುವಳಿ, ಮಹಿಳಾ ಶಿಕ್ಷಣ.

ಒಂದು ಸಮಾಜದಲ್ಲಿ ಮಹಿಳೆಯು ತನ್ನದೇ ಆದ ಬದುಕನ್ನು ರೂಪಿಸಿಕೊಳ್ಳಲು ಒಂದು ಚೌಕಟ್ಟು ಎಂಬುದು ಇರುತ್ತದೆ. ಓರ್ವ ಮಹಿಳೆಯು ತನ್ನ ಬದುಕನ್ನು ಸ್ವತಂತ್ರವಾಗಿ ಸಾಗಿಸುವ ಹಿನ್ನಲೆಯಲ್ಲಿ ಅಲ್ಲಿನ ವ್ಯವಸ್ಥೆಯನ್ನು ಕಟ್ಟುವ ಪ್ರಯತ್ನವನ್ನು ಮಾಡುತ್ತಾಳೆ. ಮಹಿಳಾ ಕಥೆಗಳಲ್ಲಿ ಕಥೆಗಾರ್ತಿಯರ ಕೇಂದ್ರಬಿಂದು ಮಹಿಳೆ. ಈ ಮಹಿಳೆಯರ ವಿವಿಧ ಜಾತಿ, ವಯಸ್ಸು, ಅಂತಸ್ತುಗಳಲ್ಲಿ ಇರುವುದನ್ನು ಸ್ತ್ರೀ ಸಂವೇದನೆಗಳಲ್ಲಿ ಕಾಣಬಹುದಾಗಿದೆ. ಮಹಿಳೆಯರು ಸಿದ್ಧಗೊಂಡ ಮಾದರಿಯಲ್ಲಿ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದಾಗಿದೆ. ಆದರೆ ಆಕೆ ವಾಸ್ತವದಲ್ಲಿ ವಿಭಿನ್ನ ರೀತಿಯಾದ ಸಂದಿಗ್ಧ ಸನ್ನಿವೇಶಗಳನ್ನು ಎದುರಿಸುವುದನ್ನು ಕಥೆಗಳಲ್ಲಿ ಕಾಣಬಹುದಾಗಿದೆ.

ಈ ಅಂತರವೇ ಮಹಿಳೆಯರ ಸಂವೇದನೆಯ ಮೂಲವೆಂದು ಹೇಳಿರುವ ಹಾಗೂ ಅವರ ಅನುಭವಗಳನ್ನು, ಅವರದೇ ಆದ ಗ್ರಹಿಕೆಯ ಹಿನ್ನಲೆಯಲ್ಲಿ ವರ್ಣಿಸುವುದೇ ಕಥಾಸಾಹಿತ್ಯದಲ್ಲಿ ನಮ್ಮ ಮಹಿಳೆಯರ ಸಂವೇದನೆಗಳೇ ಆಗಿರುತ್ತದೆ ಎಂಬುದನ್ನು ಕಾಣಬಹುದಾಗಿದೆ. ಸ್ವಾತಂತ್ರ್ಯದ ಪೂರ್ವದಲ್ಲಿ ಮಹಿಳಾ ಸಾಹಿತ್ಯದ ರಚನೆಯನ್ನು ಒಳಹೊಕ್ಕು ನೋಡಿದಾಗ ಬದುಕು ಮತ್ತು ಬರಹಗಳಿಗೆ ಸಂಬಂಧವಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಕನ್ನಡ ನಾಡಿನಲ್ಲಿ ಸ್ವಾತಂತ್ರ್ಯ ಚಳುವಳಿ, ಸುಧಾರಣಾ ಚಳುವಳಿಗಳು ತುಂಬ ಸಕ್ರಿಯವಾಗಿದ್ದ ಕಾಲವಾಗಿತ್ತು ಎಂಬುದು ತಿಳಿದುಬರುತ್ತದೆ. ಕುಟುಂಬ, ವಿವಾಹ, ದಾಂಪತ್ಯ ಇವುಗಳ ಚೌಕಟ್ಟಿನೊಳಗೆ ಬಾಲ್ಯವಿವಾಹ, ಬಾಲ್ಯವೈಧವ್ಯ, ತಂದೆ-ತಾಯಿಗಳ ಸಂಪ್ರದಾಯದ ಚೌಕಟ್ಟು, ತಾನು ಅನುಭವಿಸುತ್ತಿದ್ದ ಸಂಕಟಗಳು ಹಾಗೂ ಒಂಟಿತನವನ್ನು ತುಂಬಿಕೊಳ್ಳಲೆಂದೇ ಮಹಿಳೆಯರು ಸಾಹಿತ್ಯವನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿ ಕೊಂಡು, ಮನೆಯ ಸೀಮಿತವಾದ ಚೌಕಟ್ಟಿನಲ್ಲಿ ಕೌಟುಂಬಿಕ ಸಮಾರಂಭಗಳಿಗೆ ಅನುಗುಣವಾಗಿ ಎಲ್ಲಾ ಸಂದರ್ಭಗಳಲ್ಲೂ ಹೊಂದಾಣಿಕೆಗಳನ್ನು ಮಾಡಿಕೊಳ್ಳುವ ಮೂಲಕ ಪ್ರಧಾನ ಸಂಸ್ಕೃತಿಗೆ ಅಧೀನವಾಗಿಯೇ ಹರಿದ ಸಾಹಿತ್ಯದ ಕಾಲ ಎಂಬುದನ್ನು ಕಾಣಬಹುದಾಗಿದೆ.

ಮಹಿಳೆಯರು ತಮ್ಮ ಕಥೆಗಳ ಮೂಲಕ ಸಂತಾನ ಕುರಿತ ನಿರ್ಣಯಗಳು, ಸಂತಾನ ಹಕ್ಕುಗಳು, ದೇಹದ ಮೇಲಿನ ಹಕ್ಕುಗಳು ಎಂಬಂತಹ ವಿಚಾರಗಳನ್ನು ಕೂಡ ಅಭಿವ್ಯಕ್ತಪಡಿಸಿರುತ್ತಾರೆ.ಸ್ವಾತಂತ್ರ್ಯೋತ್ತರದ ಸ್ಥಿತ್ಯಂತರ ಸಂದರ್ಭದಲ್ಲಿ ಮಹಿಳೆಯರು ತಮ್ಮ ಉದ್ಯೋಗದಲ್ಲಿ ಹೆಚ್ಚಿನ ಆದಾಯವೆಂಬುದು ಇಲ್ಲದಿದ್ದರೂ ಕರ್ತವ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಮಹಿಳೆ ತನ್ನ ದುಡಿಮೆಯ ಮೂಲಕ ಆರ್ಥಿಕವಾಗಿ ಸ್ವಾವಲಂಬನೆಯನ್ನು ಪಡೆದುಕೊಂಡಿದ್ದಾಳೆ ಎಂಬುದು ಸಮಾಧಾನದ ಮಾತಾಗಿದ್ದರೂ ಆಕೆಯನ್ನು ಸಂಪೂರ್ಣವಾಗಿ ನಿಯಂತ್ರಣ ಮನೆಯ ಯಜಮಾನ ಮಾತ್ರ ನಿಯಂತ್ರಿಸುತ್ತಾನೆ.ಅಂತಹ ಸಂದರ್ಭದಲ್ಲಿ ಮಹಿಳೆಯರು ತಮ್ಮ ಕಾರ್ಯದಲ್ಲಿ

ಹೆಚ್ಚು ಶ್ರದ್ಧೆವಹಿಸಿ ಮುಂದುವರಿಯುವುದು ಕಷ್ಟವೇ ಸರಿ. ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ತನ್ನನ್ನು ಕುಟುಂಬದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಆಗದ ಸಮಯದಲ್ಲಿ ಮನೆಯ ಸದಸ್ಯರ ವೈಮನಸ್ಸಿಗೆ ಕಾರಣವಾಗಿ ತನ್ನ ಕುಟುಂಬದಿಂದ ತಿರಸ್ಕೃತಳಾಗುತ್ತಿದ್ದಳು. ಇದು ಕುಟುಂಬದ ವಿಘಟನೆಗೆ ಪ್ರಮುಖ ಕಾರಣ ಆಗಿರುವುದನ್ನು ಕಾಣಬಹುದಾಗಿದೆ. ಈ ಸಂದರ್ಭದಲ್ಲಿ ಮಹಿಳೆ ತನ್ನ ಬದುಕನ್ನು ಸಾಗಿಸುವ ಸಲುವಾಗಿ ಪುರುಷರಂತೆಯೇ ತಾನು ಆರ್ಥಿಕವಾಗಿ ಹೆಚ್ಚು ಸ್ವಾತಂತ್ರ್ಯ ಪಡೆಯುವ ಮೂಲಕ ಸ್ವಾವಲಂಬನೆಯ ಬದುಕನ್ನು ಸಾಗಿಸುತ್ತಿದ್ದರೂ ಕುಟುಂಬದಲ್ಲಿ ಎರಡನೇ ದರ್ಜೆಯವಳಂತೆ ನೋಡಲಾಗುತ್ತಿತ್ತು. ಇಲ್ಲಿ ಆಕೆಗೆ ತನ್ನ ಮನೆಯಲ್ಲಿ ಪರಸ್ಪರ ಪ್ರೀತಿ, ನಂಬಿಕೆಗಳ ಕೊರತೆಯು ಕಂಡು ಬಂದಾಗ ತಾನು ತನ್ನ ಮನದಾಳದ ವೇದನೆಗಳನ್ನು, ಸೂಕ್ಷ್ಮ ವಿಚಾರಗಳಿಂದ ಆಕೆ ಎದುರಿಸಿರುವ ಸಂಕಟಗಳನ್ನು ಕಥೆಗಳ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದಾಗಿದೆ.

ಮಹಿಳಾ ಕಥಾಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯು ಮೂಡಿಸಿರುವ ಹೊಸ ಬಗೆಯ ಸಾಹಿತ್ಯ ಅಧ್ಯಯನದಲ್ಲಿ ಮುಖ್ಯವಾಗಿ ಸ್ತ್ರೀವಾದಿ ವಿಮರ್ಶೆಯ ಕೃತಿಗಳು ತನ್ನದೇ ಆದ ಆಶಯದ ವಸ್ತುಗಳನ್ನು ಹೇಗೆ ಹೇಳುತ್ತದೆ, ಭಾಷೆಯ ಬಳಕೆ, ತಂತ್ರ,ಏನು, ಆಕೃತಿ ಎಂಬ ಸಾಹಿತ್ಯ ಲಕ್ಷಣಗಳಿಗೆ ಪ್ರಾಮುಖ್ಯತೆ ಕೊಡುವ ಕೃತಿನಿಷ್ಠ ಓದುವಿಕೆಗಿಂತ ಭಿನ್ನವಾಗಿರಲು ಯತ್ನಿಸುತ್ತದೆ. ಕಥೆಗಾರ್ತಿಯರು ತಮ್ಮ ಕಥೆಗಳ ಮೂಲಕ ಮಹಿಳೆಯರನ್ನು ಎಚ್ಚರಿಸುವ, ಸಮಾಜವನ್ನು ಸುಧಾರಿಸುವ ಹಾಗೂ ಮಹಿಳೆಯರ ಸ್ಥಿತಿ-ಗತಿಗಳು ಪ್ರಜ್ಞಾ ಪೂರ್ವಕವಾಗಿ ಬದಲಾಗಬೇಕು ಎಂಬ ವಿಚಾರವನ್ನು ಮಹಿಳಾ ಅಧ್ಯಯನವು ಪ್ರತಿಪಾದಿಸುತ್ತದೆ.

ಕಥೆಗಾರ್ತಿಯರಲ್ಲಿ ನವ್ಯೋತ್ತರ ಕಥನ ಕಲೆಯ ನೆಲೆಗಳಲ್ಲಿ ವೈದೇಹಿ,ಸಾರಾ ಅಬೂಬಕರ್, ಗೀತಾ ನಾಗಭೂಷಣ, ನೇಮಿಚಂದ್ರ ಇನ್ನೂ ಮುಂತಾದವರು ತಮ್ಮ ಕಥೆಗಳ ಮೂಲಕ ಮಹಿಳೆಯರ ಸಂವೇದನೆಯ ಮೂಲಕ ಭಾವ-ನಿರ್ಭರವಾದ ಕಾವ್ಯಮಯ ಭಾಷೆಯಲ್ಲಿ ಇಡೀ ಸಂಸ್ಕೃತಿಯ ಶೋಧನೆಗೆ ಪ್ರಯತ್ನಿಸುತ್ತಾರೆ. ಮಹಿಳೆಯರು ತಮ್ಮ ಕೆಲವು ಕಥೆಗಳಲ್ಲಿ ಪುರುಷರ ಸ್ವಾರ್ಥ, ದೌರ್ಜನ್ಯದಲ್ಲಿ, ನಿರಂತರ ಶೋಷಿತಳಾಗಿದ್ದರೂ ಕಷ್ಟಪಟ್ಟು ಸ್ವತಂತ್ರವಾಗಿ ಬದುಕುವುದನ್ನು ಆರಿಸಿಕೊಳ್ಳುತ್ತಾಳೆ. ಅದರ ಜೊತೆಗೆ ಬದುಕನ್ನು ತೆರೆದ ಮನಸ್ಸಿನಿಂದ ನೋಡುವಂತಹ ಮನೋಧರ್ಮ ಹಾಗೂ ಪ್ರಾಮಾಣಿಕತೆಯ ಅಭಿವ್ಯಕ್ತಿ ಎಂಬುದು ಪ್ರಧಾನವಾಗಿರುತ್ತದೆ. ಕಥೆಗಾರ್ತಿಯ ಪ್ರಮುಖ ಆಶಯವೆಂದರೆ ಇಡೀ ಮಹಿಳಾ ಸಮುದಾಯವು ಒಂದು ಸೋದರಿತ್ವದ ಭಾವವನ್ನು ಹೊಂದಬೇಕೆಂಬುದು ಆಗಿರುತ್ತದೆ. ಮಹಿಳೆಯರಿಗೆ ಇಲ್ಲಿ ಪ್ರಮುಖವಾಗಿ ಪ್ರೀತಿ,ವಿಶ್ವಾಸಗಳು ಅಖಂಡವಾಗಿ ಇವೆಯಾದರೂ,ಔಪಚಾರಿಕವಾದ ಗೌರವದ ಸಂಬೋಧನೆಗಳು ಬೇಡವೆಂಬುದು ಇದೆ. ಕುವೆಂಪುರವರು ಹೇಳಿದಂತೆಯೇ

ಇಲ್ಲಿ ಯಾರು ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ, ಎಲ್ಲರೂ ಸಮಾನರು ಎಂಬ ಅವರ ಆಶಯವನ್ನು ಮಹಿಳೆಯರು ತಮ್ಮ ಕಥೆಗಳ ಮೂಲಕ ಸಮಾಜಕ್ಕೆ ಪ್ರಜ್ಞೆ, ಜಾಗೃತಿಯನ್ನು ಮೂಡಿಸುವುದೇ ಅವರ ಮೂಲ ಉದ್ದೇಶವಾಗಿರುತ್ತದೆ. ಇಲ್ಲಿ ಒಂದೆರಡು ಕಥೆಗಾರ್ತಿಯರ ಕಥೆಗಳ ವಿಚಾರಧಾರೆಗಳನ್ನು ನಾವು ಕಾಣಬಹುದು.

ಬಾನು ಮುಷ್ತಾಕ್ ಅವರ ಕಥೆಗಳಲ್ಲಿ ಒಂದಾದ ಎದೆಯ ಹಣತೆ ಕಥೆಯಲ್ಲಿ ತಂದೆ-ತಾಯಿಗಳು ಸಂಪ್ರದಾಯದ ಹೆಸರಿನಲ್ಲಿ ಚೆನ್ನಾಗಿ ಓದುತ್ತಿದ್ದ ಮೆಹರುನ್ಗೆ ವಿವಾಹ ಮಾಡಲಾಗಿತ್ತು. ಐದು ಜನ ಮಕ್ಕಳ ತಾಯಿ ಆದ ಅವಳ ದೇಹವನ್ನು ಮಾತ್ರವಲ್ಲ, ಅವಳ ಆತ್ಮವನ್ನು ಕೂಡ ನಗ್ನಗೊಳಿಸುತ್ತಾನೆ. ಅಂತಿಮವಾಗಿ ನೀನು ನನ್ನ ತಾಯಿ ಸಮಾನ ಎಂದು ಅವಳನ್ನು ಜೀವಂತ ಜ್ವಾಲೆಗೆ ಆಹುತಿ ಮಾಡುತ್ತಾನೆ. ಆಕೆ ಮೊದಲು ಸಾಯುವ ಪ್ರಯತ್ನ ನಂತರ ಮಕ್ಕಳಿಗಾಗಿ ಬದುಕುವ ನಿರ್ಧಾರ ಮಾಡುವುದನ್ನು ಕಾಣಬಹುದಾಗಿದೆ. ತಾಯಿಯು ತನ್ನ ಒಟ್ಟಾರೆ ಎಲ್ಲಾ ಆಸೆ-ಆಕಾಂಕ್ಷೆಗಳನ್ನು ಬದಿಗಿಟ್ಟು ಮಕ್ಕಳಿಗೋಸ್ಕರ ಸಮಾಜದಲ್ಲಿ ಬದುಕನ್ನು ಸಾಗಿಸುತ್ತಾಳೆ ಎಂಬುದನ್ನು ಕಾಣಬಹುದಾಗಿದೆ. ಅವರು ಬರೆದಿರುವ ಕಥೆಯಾದವನ ಕಥೆಯಲ್ಲಿ ಡಾ. ಅಹಮದ್ನನ್ನು ಕಳೆದುಕೊಂಡ ಸೀಮಾ ತನ್ನ ಶೈಕ್ಷಣಿಕ ಚಿಂತನೆಯ ಕಾರಣದಿಂದಾಗಿ ಸಮಾಜಕ್ಕೆ ಹೆದರದೇ ಶಮೀಮ್ನ ಜೊತೆ ಹೊಸ ಜೀವನಕ್ಕೆ ಹೆಜ್ಜೆ ಇಡುವ ಪ್ರಯತ್ನವನ್ನು ಈ ಕಥೆಯಲ್ಲಿ ನೋಡಬಹುದಾಗಿದೆ.'' ಇಡೀ ವಿಶ್ವವೇ ಮಲಗಿ ನಿದ್ರಿಸುತ್ತಿರುವಾಗ ಅವಳು ತನ್ನ ಕಥೆಯ ಹೊಸ ಅಧ್ಯಾಯವನ್ನು ಬರೆಯಲು ಕುಳಿತಳು''2 ವಿದ್ಯಾಭ್ಯಾಸವನ್ನು ಪಡೆದು ಮಹಿಳೆಯರು ತಮ್ಮ ಬದುಕನ್ನು ಸಮಾಜದಲ್ಲಿ ಯಾವ ರೀತಿಯಲ್ಲಿ ರೂಪಿಸಿಕೊಳ್ಳಬೇಕು ಎಂಬ ಅಂಶವನ್ನು ಮಹಿಳೆಯರು ತಮ್ಮ ಬದುಕಿನ ವಿಚಾರಗಳನ್ನು ಸಮಾಜಕ್ಕೆ ಕಥೆಗಳ ಮೂಲಕ ತಿಳಿಸಿರುವುದನ್ನು ಕಾಣಬಹುದಾಗಿದೆ.

ವೈದೇಹಿಯವರ ''ಕ್ರೌಂಚ ಪಕ್ಷಿಗಳು'' ಎಂಬ ಕಥೆಯಲ್ಲಿ ಲಕ್ಷ್ಮೀನಾರಾಯಣರವರನ್ನು ಕ್ರೌಂಚ ಪಕ್ಷಿಯೆಂಬುದಾಗಿ ಗುರುತಿಸುವ ಹಾಗೂ ಅವರ ಮೊದಲನೇ ಹೆಂಡತಿಯಾದ ಲಕ್ಷ್ಮಮ್ಮನವರ ಪಾತ್ರದ ಮೂಲಕ ''ಮನುಷ್ಯ-ಮನುಷ್ಯನಾಗಿರುವುದು ಸಾಮಾನ್ಯ ಸ್ಥಿತಿಯಲ್ಲಿ ಮಾತ್ರ, ಸಿದ್ಧಾಂತ ತತ್ವ ರೀತಿ-ನೀತಿಗಳ ಬುಡ ತುಸುವೇ ಅಲ್ಲಾಡಿದರೂ ಮೊದಲು ಬಲಿಯಾಗುವುದು ಮಹಿಳೆ, ಅವಳ ದೇಹ, ಅವಳ ಮನಸ್ಸು, ಅವಳ ಬದುಕು''[1] ಎಂಬುದಾಗಿ ಹೇಳಿರುವುದನ್ನು ನಾವು ಒಪ್ಪಿಕೊಳ್ಳಲೇ ಬೇಕಾದ ಅಂಶವಾಗಿ ಕಂಡು ಬರುತ್ತದೆ. ಇದು ನವ್ಯೋತ್ತರ ಕಥನ ನೆಲೆಯಾಗಿದ್ದು, ಇಲ್ಲಿ ಮಹಿಳಾ ಲೋಕದ ಮಾನಸಿಕ ಮತ್ತು ಬಾಹ್ಯ ದನಿಗಳನ್ನು ನಿರ್ಭಾವುಕತೆಯಿಂದ ಅಭಿವ್ಯಕ್ತಪಡಿಸಿರುವುದನ್ನು ನಾವು ಮಹಿಳಾ ಕಥೆಗಳಲ್ಲಿ ಕಾಣಬಹುದಾಗಿದೆ.

ವೈದೇಹಿಯವರ ಕಥೆಗಳಲ್ಲಿ ಹೆಣ್ಣು ಮಕ್ಕಳ ಅಥವಾ ಮಹಿಳೆಯ ಸೂಕ್ಷ್ಮ ಒಳನೋಟಗಳನ್ನು ಕಾಣುವುದರ ಜೊತೆಗೆ ಮಹಿಳೆಯರ ವಾದಗಳನ್ನು ಸ್ಪಷ್ಟಪಡಿಸುವುದು ಅವರ ಉದ್ದೇಶವಲ್ಲ. ಮಹಿಳೆಯರು ಬಡತನದಿಂದ

ಅಸಹಾಯಕತೆಯನ್ನು ಹೊಂದಿರುವ ಮೂಲಕ ಪುರುಷ ಪ್ರಧಾನ್ಯ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರುವ ಅಂಶಗಳನ್ನು ಅಭಿವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ.

ಒಟ್ಟಾರೆ ಮಹಿಳೆಯರು ತಮ್ಮ ಕಥೆಗಳಲ್ಲಿ ಹೆಣ್ಣಿನ ಜನನ ಪೂರ್ವ, ಶೈಶವ ಪೂರ್ವ ಬಾಲ್ಯ, ಹದಿಹರೆಯ, ಪ್ರೌಢತ್ವ, ವೃದ್ಧಪ್ಯ ಎಲ್ಲಾ ಹಂತಗಳಲ್ಲಿಯೂ ಹೇಗೆ ಸಮಾಜದಲ್ಲಿ ತಮ್ಮ ಬದುಕನ್ನು ಸಾಗಿಸುವ ಮೂಲಕ ಬದುಕಿಗೆ ಪರಿಪೂರ್ಣ ಅರ್ಥವನ್ನು ಕಂಡುಕೊಳ್ಳುವುದು ಹಾಗೂ ಪುರುಷ ಪ್ರಧಾನ್ಯ ಸಮಾಜದಲ್ಲಿ ತನಗೂ ಮಾನ್ಯತೆಯನ್ನು ದೊರಕಿಸಿಕೊಳ್ಳಲು ತನ್ನ ಅಂತರಾಳದ ವಿಷಯವಾರು ವಿಚಾರಧಾರೆಗಳನ್ನು ಕಥೆಗಳ ಮೂಲಕ ಹೇಳುವ ಪ್ರಯತ್ನದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವುದನ್ನು ನಾವು ಮಹಿಳಾ ಕಥಾ ಸಾಹಿತ್ಯದ ಹಿನ್ನಲೆಯಲ್ಲಿ ನೋಡಬಹುದಾಗಿದೆ.

**ಕೊನೆ ಟಿಪ್ಪಣಿಗಳು:**

1. ವೈದೇಹಿ. (2018). ವೈದೇಹಿಯವರ ಸಮಗ್ರ ಕಥೆಗಳು. ಅಕ್ಷರ ಪ್ರಕಾಶನ. ಸಾಗರ. ಪು.ಸಂ. 672

**ಪರಾಮರ್ಶನ ಗ್ರಂಥಗಳು:**

1. ಬಾನುಮುಷ್ತಾಕ್. (2013). ಹಸೀನಾ ಮತ್ತು ಇತರ ಕಥೆಗಳು. ಅಭಿರುಚಿ ಪ್ರಕಾಶನ. ಮೈಸೂರು.
2. ವೈದೇಹಿ. (2018). ವೈದೇಹಿಯವರ ಸಮಗ್ರ ಕಥೆಗಳು. ಅಕ್ಷರ ಪ್ರಕಾಶನ. ಸಾಗರ.
3. ಅಮರೇಶ ನುಗಡೋಣಿ. (2014). ಕಥೆ ಹುಟ್ಟುವ ಪರಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ಆಶಾದೇವಿ ಎಂ. ಎಸ್. (2016). ನಾರಿಕೇಳಾ. ಪ್ರಜಾವಾಣಿ ಪ್ರಕಾಶನ. ಬೆಂಗಳೂರು.
5. ಗೀತಾ ಪ್ರಸಾದ್. (2009). ಆಧುನಿಕ ಮಹಿಳಾ ಅಭಿವ್ಯಕ್ತಿ. ಧಾತ್ರಿ ಪುಸ್ತಕ. ಬೆಂಗಳೂರು.
6. ಮಲ್ಲಿಕಾ ಎಸ್. ಘಂಟಿ. (1994). ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ. ಯುವಲೋಕ ಪ್ರಕಾಶನ. ಧಾರವಾಡ.
7. ಸುಮಿತ್ರಬಾಯಿ ಬಿ. ಎನ್. (1995). ಸ್ತ್ರೀವಾದಿ ಪ್ರವೇಶಿಕೆ. ಕರ್ನಾಟಕ ಲೇಖಕಿಯರ ಸಂಘ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.